ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ  ದಂಡಾಧಿಕಾರಿಗಳು ಹಿರಿಯೂರು

ಇವರ ನ್ಯಾಯಾಲಯದಲ್ಲಿ

**MVC** 295/2023

ಆರ್      ಡಬ್ಲು – 1

| | | |
|---|---|---|
| ಸಾಕ್ಷಿಯ ಹೆಸರು | : | ಪವನ್ ಕುಮಾರ್ |
| ತಂದೆ   ಹೆಸರು | : | ಉಮೇಶ್ ಭಂಡಾರಿ |
| ವಯಸ್ಸು | : | **26**    ವರ್ಷ |
| ಉದ್ಯೋಗ | : | ಅಸಿಸ್ಟೆಂಟ್ ಮ್ಯಾನೇಜರ್ |
| ವಾಸ | : | ಬೆಂಗಳೂರು |

ಸಾಕ್ಷಿಯನ್ನು ದಿಃ  18.12.2025  ರಂದು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.

**ಮುಖ್ಯ ವಿಚಾರಣೆ : 2 ನೇ ಎದುರುದಾರರ   ಪರ ಶ್ರೀ  ಎಸ್ ವಿ   ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು  ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ಆಥರೈಸೇಷನ್ ಹಾಜರು ಪಡಿಸಿದ್ದು ಅದನ್ನು ನಿಆರ್–1 ಎಂದು ವಿಮಾ ಪಾಲಸಿಯನ್ನು ನಿಆರ್–2 ಎಂದು ಗುರುತಿಸಲಾಯಿತು. ಆಡಳಿತ ವೈದ್ಯಾಧಿಕಾರಿಗಳು ಹಿರಿಯೂರು ಮತ್ತು ನಿವಾಸಿ ವೈದ್ಯಾಧಿಕಾರಿ ಜಿಲ್ಲಾ ಆಸ್ಪತ್ರೆ  ಚಿತ್ರದುರ್ಗ ಇವರು ಎಂ ಎಲ್ ಸಿ ಪುಸ್ತಕದಲ್ಲಿ ದಾಖಲಾಗಿಲ್ಲ ಎಂದು ನೀಡಿದಂತಹ ಪತ್ರಗಳನ್ನು ನಿಆರ್–3 ಮತ್ತು 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಸಿ ಎಂ ವಕೀಲರಿಂದಃ**

ಈ ಪ್ರಕರಣಕ್ಕೆ ಸಬಂಧಪಟ್ಟ ಎಲ್ಲಾ ದಾಖಲೆಗಳನ್ನು ನಾನು ನೋಡಿರುತ್ತೇನೆ. ದೂರಿನಲ್ಲಿ ಅರ್ಜಿದಾರರು ಹಿರಿಯೂರು ಆಸ್ಪತ್ರೆಗೆ ಹೋಗಿ ನಂತರ ,ಚಿತ್ರದುರ್ಗದ ಆಸ್ಪತ್ರೆಗೆ ಹೋಗಿ ನಂತರ ನಿಮಾನ್ಸ್ ಆಸ್ಪತ್ರೆಗೆ ಹೋಗಿದ್ದರು ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಆ ರೀತಿಯಾಗಿ ನಮೂದು ಇದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರ್    ಡಬ್ಲು – 1

ಅರ್ಜಿದಾರರು ಅಪಘಾತವಾದ ಕೂಡಲೇ ಹಿರಿಯೂರು ಆಸ್ಪತ್ರೆಗೆ ಹೋದಾಗ ಅವರು ಚಿಕಿತ್ಸೆ ನೀಡದೇ ಚಿತ್ರದುರ್ಗದ ಆಸ್ಪತ್ರೆಗೆ ಕಳುಹಿಸಿದ್ದು , ಚಿತ್ರದುರ್ಗದ ಆಸ್ಪತ್ರೆಯವರು ಅಲ್ಲಿ ಚಿಕಿತ್ಸೆ ನೀಡದೇ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ರೀತಿಯಾಗಿ ನಿಮಾನ್ಸ್ ಆಸ್ಪತ್ರೆಯಲ್ಲಿ ಇದುದ್ದರಿಂದ ದೂರು ಕೊಡಲು ತಡವಾಗಿದೆ ಎಂದರೆ ಸರಿಯಲ್ಲ. ನಮ್ಮ ಕಂಪನಿಯಿಂದ ಪ್ರತ್ಯೇಕವಾಗಿ ತನಿಖೆ ಮಾಡಿಸಿರುವುದಿಲ್ಲ. ನಾವು ದೋಷಾರೋಪಣಾ ಪಟ್ಟಿ  ಯನ್ನು ಪ್ರಶ್ನಿಸಿರುವುದಿಲ್ಲ. ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅಪಘಾತ ನಮ್ಮ ವಾಹನದಿಂದ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಕೊಡವುದನ್ನು ತಪ್ಪಿಸಿಕೊಳಲ್ಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ  ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ  ಎಂ ಎಫ್ ಹಿರಿಯೂರು